# ಬೋರೇಗೌಡ ಚಿಕ್ಕಮರಳಿ ಅವರ ಕಥನ ಸಾಹಿತ್ಯದಲ್ಲಿ ದಲಿತ ಸಂವೇದನೆಯ ನೆಲೆ

**ಸೋಮಶೇಖರ ವಿ. ಪಿ.**
ಅತಿಥಿ ಉಪನ್ಯಾಸಕ
ಕನ್ನಡ ವಿಭಾಗ
ಮಂಡ್ಯ ವಿಶ್ವವಿದ್ಯಾಲಯ
ಮಂಡ್ಯ.

**Article Link: https://aksharasurya.com/2023/12/somashekar-v-p/**

## ABSTRACT:

ಬೋರೇಗೌಡ ಚಿಕ್ಕಮರಳಿ ಕಥನಗಳಲ್ಲಿ ಸಮಾಜದ ಜಾತಿವ್ಯವಸ್ಥೆಯ ತಾರತಮ್ಯದಿಂದಾಗಿ ತಳಸಮುದಾಯದವರ ಮೇಲಿನ ಶೋಷಣೆಗಳು, ಇವರ ನೋವುಗಳು, ಅಸ್ಪೃಶ್ಯತೆಯ ವರ್ತನೆಗಳು ಹೇಗೆ ಸಮಾಜದಲ್ಲಿ ಅಸ್ತಿತ್ವದಲ್ಲಿವೆ ಎಂಬುದನ್ನು ಕಾಣಬಹುದು. ಹಾಗೆಯೇ ಇವುಗಳ ವಿರುದ್ಧ ದಲಿತರ ಪ್ರತಿಭಟನಾ ಧೋರಣೆಗಳನ್ನು ತಮ್ಮ ಕಥನದಲ್ಲಿ ಚಿತ್ರಿಸಿರುವುದನ್ನು ಕಾಣಬಹುದು.

'ನೆಲ್ಲೂರಿನಲ್ಲಿ ಒಂದು ದಿನ' ಕಾದಂಬರಿಯಲ್ಲಿ ಕಾದಂಬರಿಕಾರರು ಜಮೀನ್ದಾರರು ಬಡವರ ಭೂಮಿಯನ್ನು ಮೋಸದಿಂದ ಕಸಿದುಕೊಂಡು ಅವರ ಮೇಲೆ ಹೇಗೆ ದೌರ್ಜನ್ಯಗಳನ್ನು ಎಸಗುತ್ತಾರೆ ಎನ್ನುವುದನ್ನು ಚಿತ್ರಿಸುತ್ತಾರೆ. ಕಾದಂಬ ರಿಯಲ್ಲಿನ ಪಾತ್ರವಾದ ಮಾದನ ತಂದೆ ಮಾಡಿದ ಸಾಲಕ್ಕೆ ಕ್ಯಾತೇಗೌಡನಿಗೆ ತನ್ನ ಭೂಮಿಯನ್ನು ಭೋಗ್ಯಕ್ಕೆ ನೀಡಿರುತ್ತಾನೆ. ಜಮೀನಿನ ಭೋಗ್ಯದ ಅವಧಿ ಕಳೆದ ಕಾರುಬೆಳೆಗೆ ಮುಗಿದಿತ್ತು. ಮಾದನಿಗೆ ಈಗ ಹೊಸ ಸಮಸ್ಯೆಗಳು ಹುಟ್ಟಿಕೊಂಡಿತ್ತು. ಕ್ಯಾತೇಗೌಡನಿಗೆ ತನ್ನ ಜಮೀನನ್ನು ಭೋಗ್ಯ ಕೊಟ್ಟಿದ್ದುದಕ್ಕೆ ಮಾದನ ತಂದೆ ಕಾಗದ ಪತ್ರಗಳ ಸಾಕ್ಷ್ಯಿಯನ್ನು ಇಟ್ಟುಕೊಂಡಿರಲಿಲ್ಲ. ಅದು ಕೇವಲ ಬಾಯಿಮಾತಿನ ಒಪ್ಪಂದವಾಗಿತ್ತು. ಅವನು ಕೊಟ್ಟಿದ್ದ ಎರಡು ಸಾವಿರ ರೂಪಾಯಿಗಳಿಗೆ ಹತ್ತು ವರ್ಷಗಳ ಭೋಗ್ಯ ಅನುಭವಿಸಿದ್ದನು. ಆದರೆ ಈಗ ಕ್ಯಾತೇಗೌಡ ಮಾತು ತಪ್ಪಿ ಹದಿನೈದು ವರ್ಷಗಳ ಭೋಗ್ಯವನ್ನು ಮಾತಾಡಿತ್ತೆಂದು ಮಾದ ಹೊನ್ನೇಗೌಡರ ಬಳಿ ದೂರನ್ನು ಹೇಳಿಕೊಂಡಿದ್ದನು. ಹೊನ್ನೇಗೌಡರು ಸಹ ಜಮೀನಿಗೆ ಎತ್ತು ಕಟ್ಟಲು ಸೂಚಿಸಿ ತಮ್ಮ ಎತ್ತುಗಳನ್ನೆ ಮಾದನಿಗೆ ನೀಡಿದ್ದರು. ಆದರೆ ಕ್ಯಾತೇಗೌಡನಿಗೆ ಹೊನ್ನೇಗೌಡರ ಎತ್ತುಗಳು ಮಾದನ ಜಮೀನಿನಲ್ಲಿ ದುಡಿಯುವುದು ಇಷ್ಟವಿರಲಿಲ್ಲ. ಅವನಿಗೆ ಮಾದನ ಜಾತಿ ಅಡ್ಡವಾಗಿತ್ತು. ಆದರೆ ಮಾರನೆಯ ದಿನ ತಾನು ಬರುವುದಕ್ಕೆ ಮೊದಲೇ ಕ್ಯಾತೇಗೌಡರ ಎತ್ತುಗಳು ಮಾದನ ಜಮೀನಿನಲ್ಲಿ ದುಡಿಯುತ್ತಿದ್ದದ್ದು ಮಾದನ ಕೋಪಕ್ಕೆ ಕಾರಣವಾಯಿತು. ಕೇಳಲು ಹೋದರೆ ಕ್ಯಾತೇಗೌಡ ಮತ್ತವನ ಮಗ ನಂಜುಂಡ ಇವನ ವಿರುದ್ಧ

ಜಗಳಕ್ಕೆ ನಿಂತರು.

ಹೀಗೆ ಒಟ್ಟಾರೆ ನೆಲ್ಲೂರಿನ ದಲಿತರ ಬದುಕು ಇತರೆಡೆಗಳಲ್ಲಿ ದಲಿತರ ಬದುಕಿನ ವಾಸ್ತವತೆಯನ್ನೆ ತೆರೆದಿಡುತ್ತದೆ. ದಲಿತರನ್ನು ಶೋಷಿಸುತ್ತಿರುವುದು ಬ್ರಾಹ್ಮಣವರ್ಗವೆಂದು ಚಿತ್ರಿಸುವ ಕನ್ನಡ ಸಾಹಿತ್ಯ ಈ ದಲಿತರ ಆರ್ಥಿಕ, ಸಾಮಾಜಿಕ ಶೋಷಣೆಗೆ ಮೂಲ ಕಾರಣ ಜಮೀನ್ದಾರರು ಎನ್ನುವ ಶ್ರಮಭಾಷೆಯ ಧೋರಣೆಗಳನ್ನು ವ್ಯಕ್ತಪಡಿಸುವುದು ಕಡಿಮೆ. ಹಾಗೊಂದು ವೇಳೆ ಶ್ರಮಸಂಸ್ಕೃತಿ ಹಿನ್ನೆಲೆಯಲ್ಲಿ ಕನ್ನಡ ಸಾಹಿತ್ಯವನ್ನು ಅವಲೋಕಿಸಿದರೆ ದಲಿತರ ಸಮಕಾಲೀನ ಪರಿಸ್ಥಿತಿಗೆ ಮೂಲ ಕಾರಣ ಜಮೀನ್ದಾರರ ಶೋಷಣೆಯೆನ್ನುವ ಸಾಮಾನ್ಯ ಅರಿವು ನಮಗುಂಟಾಗುತ್ತದೆ. ಪೌರೋಹಿತ್ಯ ವರ್ಗದ ವಿರುದ್ಧ ದಲಿತರನ್ನು ಎತ್ತಿಕಟ್ಟುವ ಬದಲು ಜಮೀನ್ದಾರರ ಶ್ರಮಭಂಜಕ ನಡವಳಿಕೆಯ ವಿರುದ್ಧ ಮಾತನಾಡಬೇಕಾದ ಪರಿಸ್ಥಿತಿ ಇಂದು ತಲೆದೋರಿದೆ. ಈ ಮಾತುಗಳಿಗೆ ಉದಾಹರಣೆಯಾಗಿ ನೆಲ್ಲೂರಿನ ಚಿತ್ರಣ ಕಂಡುಬರುತ್ತದೆ ಎನ್ನಬಹುದಾಗಿದೆ.

ಸತ್ತವನ ಸುಳಿಯಲ್ಲಿ ಕತೆಯಲ್ಲಿ ಬರುವ ಹೊಲೆಯರ ರಾಚನ ಹಿನ್ನೆಲೆಯಲ್ಲಿ ಜಮೀನ್ದಾರರು ಹಾಗೂ ಹೊಲೆಯರ ಸಂಬಂಧ ಚಿಕ್ಕಂದಿನಿಂದ ದೊಡ್ಡವರತನಕ ಹೇಗೆ ಬೆಳೆದುಬರುತ್ತದೆ ಎನ್ನುವುದನ್ನು ತಿಳಿಸುತ್ತದೆ. ಹುಟ್ಟುತ್ತಾ ಅಣ್ಣತಮ್ಮಂದಿರು ಬೆಳೆಯುತ್ತಾ ದಾಯಾದಿಗಳು ಎನ್ನುವ ರೀತಿಯಲ್ಲಿ ಚಿಕ್ಕಂದಿನಲ್ಲಿ ಸ್ನೇಹಿತರು, ಬೆಳೆದ ಮೇಲೆ ಜಾತಿವಂತರು ಎನ್ನುವಂತಹ ಪರಿಸ್ಥಿತಿಯನ್ನು ದ್ಯಾವೇಗೌಡರ ಹಿನ್ನೆಲೆಯಲ್ಲಿ ರಾಚ ಈ ರೀತಿಯಲ್ಲಿ ವಿವರಿಸುತ್ತಾನೆ. ದೈಹಿಕ ಕೊಳಕಿಗಿಂತ ಮಾನಸಿಕ ಕೊಳಕು ದೊಡ್ಡದು. ಜಾತಿಯಿಂದ ಕೀಳಾಗಿದ್ದರೂ ರಾಚ ಗುಣದಲ್ಲಿ ದ್ಯಾವಪ್ಪನಿಗಿಂತಲೂ ಮೇಲು ಎನ್ನುವುದನ್ನು ಲೇಖಕರು ಇಲ್ಲಿ ಸ್ಪಷ್ಟವಾಗಿ ಚಿತ್ರಿಸುತ್ತಾರೆ. ಜಾತಿ ಮೇಲಾಗಿರುವುದಕ್ಕಿಂತಲೂ ಗುಣ ಮೇಲಾಗಿರಬೇಕು ಎನ್ನುವುದನ್ನು ಲೇಖಕರು ಮುಖ್ಯವಾಗಿ ಗುರುತಿಸುತ್ತಾರೆ.

## KEY WORDS:

ದಲಿತ, ಸಂವೇದನೆ, ಜಾತಿವ್ಯವಸ್ಥೆ, ಭೂಮಿ, ಪ್ರತಿಭಟನೆ.

ಬೋರೇಗೌಡ ಚಿಕ್ಕಮರಳಿ ಕಥನಗಳಲ್ಲಿ ಸಮಾಜದ ಜಾತಿವ್ಯವಸ್ಥೆಯ ತಾರತಮ್ಯದಿಂದಾಗಿ ತಳಸಮುದಾಯದವರ ಮೇಲಿನ ಶೋಷಣೆಗಳು, ಇವರ ನೋವುಗಳು, ಅಸ್ಪೃಶ್ಯತೆಯ ವರ್ತನೆಗಳು ಹೇಗೆ ಸಮಾಜದಲ್ಲಿ ಅಸ್ತಿತ್ವದಲ್ಲಿವೆ ಎಂಬುದನ್ನು ಕಾಣಬಹುದು. ಹಾಗೆಯೇ ಇವುಗಳ ವಿರುದ್ಧ ದಲಿತರ ಪ್ರತಿಭಟನಾ ಧೋರಣೆಗಳನ್ನು ತಮ್ಮ ಕತೆಗಳಲ್ಲಿ ಚಿತ್ರಿಸಿರುವುದನ್ನು ಕಾಣಬಹುದು.

'ನೆಲ್ಲೂರಿನಲ್ಲಿ ಒಂದು ದಿನ' ಕಾದಂಬರಿಯಲ್ಲಿ ಕಾದಂಬರಿಕಾರರು

ಜಮೀನ್ದಾರರು ಬಡವರ ಭೂಮಿಯನ್ನು ಮೋಸದಿಂದ ಕಸಿದುಕೊಂಡು ಅವರ ಮೇಲೆ ಹೇಗೆ ದೌರ್ಜನ್ಯಗಳನ್ನು ಎಸಗುತ್ತಾರೆ ಎನ್ನುವುದನ್ನು ಚಿತ್ರಿಸುತ್ತಾರೆ. ಕಾದಂಬರಿಯಲ್ಲಿನ ಪಾತ್ರವಾದ ಮಾದನ ತಂದೆ ಮಾಡಿದ ಸಾಲಕ್ಕೆ ಕ್ಯಾತೇಗೌಡನಿಗೆ ತನ್ನ ಭೂಮಿಯನ್ನು ಭೋಗ್ಯಕ್ಕೆ ನೀಡಿರುತ್ತಾನೆ. ಜಮೀನಿನ ಭೋಗ್ಯದ ಅವಧಿ ಕಳೆದ ಕಾರುಬೆಳೆಗೆ ಮುಗಿದಿತ್ತು. ಮಾದನಿಗೆ ಈಗ ಹೊಸ ಸಮಸ್ಯೆಗಳು ಹುಟ್ಟಿಕೊಂಡಿತ್ತು. ಕ್ಯಾತೇಗೌಡನಿಗೆ ತನ್ನ ಜಮೀನನ್ನು ಭೊಗ್ಯ ಕೊಟ್ಟಿದ್ದುದಕ್ಕೆ ಮಾದನ ತಂದೆ ಕಾಗದ ಪತ್ರಗಳ ಸಾಕ್ಷ್ಯಿಯನ್ನು ಇಟ್ಟುಕೊಂಡಿರಲಿಲ್ಲ. ಅದು ಕೇವಲ ಬಾಯಿಮಾತಿನ ಒಪ್ಪಂದವಾಗಿತ್ತು. ಅವನು ಕೊಟ್ಟಿದ್ದ ಎರಡು ಸಾವಿರ ರೂಪಾಯಿಗಳಿಗೆ ಹತ್ತು ವರ್ಷಗಳ ಭೋಗ್ಯ ಅನುಭವಿಸಿದ್ದನು. ಆದರೆ ಈಗ ಕ್ಯಾತೇಗೌಡ ಮಾತು ತಪ್ಪಿ ಹದಿನೈದು ವರ್ಷಗಳ ಭೋಗ್ಯವನ್ನು ಮಾತಾಡಿತ್ತೆಂದು ಮಾದ ಹೊನ್ನೇಗೌಡರ ಬಳಿ ದೂರನ್ನು ಹೇಳಿಕೊಂಡಿದ್ದನು. ಹೊನ್ನೇಗೌಡರು ಸಹ ಜಮೀನಿಗೆ ಎತ್ತು ಕಟ್ಟಲು ಸೂಚಿಸಿ ತಮ್ಮ ಎತ್ತುಗಳನ್ನೆ ಮಾದನಿಗೆ ನೀಡಿದ್ದರು. ಆದರೆ ಕ್ಯಾತೇಗೌಡನಿಗೆ ಹೊನ್ನೇಗೌಡರ ಎತ್ತುಗಳು ಮಾದನ ಜಮೀನಿನಲ್ಲಿ ದುಡಿಯುವುದು ಇಷ್ಟವಿರಲಿಲ್ಲ. ಅವನಿಗೆ ಮಾದನ ಜಾತಿ ಅಡ್ಡವಾಗಿತ್ತು. ಆದರೆ ಮಾರನೆಯ ದಿನ ತಾನು ಬರುವುದಕ್ಕೆ ಮೊದಲೇ ಕ್ಯಾತೇಗೌಡರ ಎತ್ತುಗಳು ಮಾದನ ಜಮೀನಿನಲ್ಲಿ ದುಡಿಯುತ್ತಿದ್ದದ್ದು ಮಾದನ ಕೋಪಕ್ಕೆ ಕಾರಣವಾಯಿತು. ಕೇಳಲು ಹೋದರೆ ಕ್ಯಾತೇಗೌಡ ಮತ್ತವನ ಮಗ ನಂಜುಂಡ ಇವನ ವಿರುದ್ಧ ಜಗಳಕ್ಕೆ ನಿಂತರು.

"ಕೊಟ್ಟಿರೊತ್ಗೇ ಮಂತೆ ಹತ್ವೊರ್ಸ್‌ದಿಂದ ಅದ್ರತ್ರಸ್ಟ್ ದುಡ್ಕಂದುದದ್ದು. ಇನ್ನೂ ದುಡ್ಕಳೀಕೆ ಇದೇನು ನಿಮ್ಮಪ್ಪನ್ಮನೆ ಗದ್ದೆ ಅಂತತ ಇಳ್ಕಬುಟ್ಟ?"

ಮಾದನೂ ಅಪ್ಪಗಿಪ್ಪ ಅಂತ ಮಾತಾಡಿದ್ದು ಏರು ಉಳುತ್ತಿದ್ದ ಕ್ಯಾತೇಗೌಡನ ಮಗ ನಂಜುಂಡನಿಗೆ ಸರಿಕಾಣಲಿಲ್ಲ. 'ಏನ್ಲಾ, ನಾಲ್ಗೆ ಎಟುಗ್ಸಿ ದೊಡ್ಡೋರ್ ಸಮ ಮಾತಾಡ್ತೀಯೆ ಮಗ್ನೆ' ಎಂದು ಉಳುವ ಕೋಲಿನಿಂದ ನಾಲ್ಕು ಬಿಗಿದೇಬಿಟ್ಟ. ತನಗಿಂತ ಕಿರಿಯ ಹುಡುಗನೊಬ್ಬ ತನ್ನನ್ನು ಮಗನೇ ಎಂದುದಲ್ಲದೆ ಬಿದಿರು ಕೋಲಿನಿಂದು ಹೊಡೆದೂಬಿಟ್ಟದು ಮಾದನಲ್ಲಿ ರೋಷವನ್ನು ಉಕ್ಕಿಸಿತು. ಆದ ರೆ ಪ್ರತಿಯಾಗಿ ತಾನೂ ಕೈ ಮಾಡುವ ಧೈರ್ಯವನ್ನು ಮಾತ್ರ ತಂದುಕೊಡಲಿಲ್ಲ. ಕೋಲಿನ ಏಟಿನಿಂದ ಚೇತರಿಸಿಕೊಳ್ಳುವ ಮುಂಚೆಯೇ ಹಿಂದಿನಿಂದ ಬಿದ್ದ ಅನಿ ರೀಕ್ಷಿತ ಹೊಡೆತಕ್ಕೆ ಮದ ಮುಗ್ಗರಿಸಿದ. ಮುಂದೆಯೇ ಇದ್ದ ಎತ್ತುಗಳಿಗೆ ಕಟ್ಟಿದ್ದ ನೇಗಿಲಿನ ತುದಿ ಹಣೆಗೆ ಚುಚ್ಚಿ ತೂತು ಮಾಡಿತು. 'ಅಯ್ಯಯ್ಯಪ್ಪೋ ನನ್ ಕೊಂದ್ರಲೋ' ಎಂದು ಚೀರುತ್ತಾ ರಕ್ತ ಸೋರುತ್ತಿದ್ದ ಹಣೆಯನ್ನು ಕೈಯಿಂದ ಮುಚ್ಚಿಕೊಂಡು ನೆಲಕ್ಕೆ ಕುಸಿದ. ಇಲ್ಲಿ ಜಮೀನ್ದಾರರ ದರ್ಪ, ದವಲತ್ತುಗಳು ಬಡವರ

ಅಸಹಾಯಕತೆಯ ಮುಂದೆ ದೊಡ್ಡದಾಗುವ ದುರಂತವನ್ನು ಕಾಣಬಹುದಾಗಿದೆ. ಬಡವರ ಅಸಹಾಯಕತೆಯನ್ನು ಹೇಗೆ ತಮ್ಮ ಸ್ವಾರ್ಥಕ್ಕಾಗಿ ಬಳಸಿಕೊಂಡು ದಲಿತರನ್ನು ಹಿಂಸಿಸುತ್ತಾರೆಂದು ಕಾಣಬಹುದು. ಕತೆಯಲ್ಲಿ ಕಾಶೀಪತಿರಾಯರ ಮನೆಯಲ್ಲಿ ಸತ್ತುಬಿದ್ದ ಹಸುವಿನ ದೇಹವನ್ನು ಹೊತ್ತೊಯ್ಯುವಾಗ ಮಾತ್ರ ದಲಿತರ ಕುರಿತು ಚಿಂತಿಸುವ ಮೇಲ್ವರ್ಗದವರಿಗೆ ದಲಿತರ ಮೇಲಾದ ಕೊಲೆಯ ಪ್ರಯತ್ನ ಮಾತ್ರ ಕಾಣಿಸುವುದಿಲ್ಲ. ದಲಿತರು ತಮ್ಮ ಮೇಲಾಗುತ್ತಿದ್ದ ದೌರ್ಜನ್ಯದ ವಿರುದ್ಧ ಪೋಲಿಸರ ಮೊರೆ ಹೋಗುವುದಾಗಿ ಹೇಳಿದಾಗ ಅದನ್ನು ಊರಿನ ಗೌಡರು ನಿರಾಕರಿಸುತ್ತಾರೆ. 'ಇನ್ನೊಂದ್ಸತಿ ಪೋಲೀಸು ಗೀಲೀಸು ಅಂದ್ರೆ ಹುಟುನಿಲ್ಲ ಅನ್ನಿಸ್ಬುಡ್ತೀನಿ ಬೋಳಿಮಗ್ನೆ, ಮೊದ್ಲು ಹೇಳ್ದಸ್ಟ್ ಕೆಲ್ಸ ಮಾಡು' ಎನ್ನುವ ಗದರಿಕೆಯ ಮಾತುಗಳು ಎದುರಾಗುತ್ತವೆ.

ಕಾದಂಬರಿಯಲ್ಲಿ ಮೇಲ್ವರ್ಗದವರು ದಲಿತರನ್ನು ಏಕವಚನದಲ್ಲಿ ಮಾತನಾಡುವ, ಆ ಏಕವಚನದ ಕುರಿತು ಅರಿವೂ ಸಹ ದಲಿತರಿಗೆ ಇರದೇ ಹೋದುದರ ಕುರಿತು ಚಿತ್ರಣ ದೊರೆಯುತ್ತದೆ. ಲಕ್ಷ್ಮಿಯ ಮನೆಗೆ ಸಾರನ್ನು ತರಲು ಹೋಗುವ ತಿಮ್ಮಿಯನ್ನು ಲಕ್ಷ್ಮಿ ಹಾಗೂ ಅವಳ ಗಂಡ ತಿಮ್ಮೇಗೌಡ ಏಕವಚನದಲ್ಲಿ ಕರೆಯುವ ಸಂದರ್ಭವನ್ನು ಲೇಖಕರು ಹೀಗೆ ಸಮರ್ಥಿಸಿಕೊಳ್ಳುತ್ತಾರೆ. "ತಿಮ್ಮೆಗೌಡ ಹಾಗೂ ಲಕ್ಷ್ಮಿಯರು ವಯಸ್ಸಿನಲ್ಲಿ ತಿಮ್ಮಿಗಿಂತ ಹಿರಿಯರಲ್ಲದಿದ್ದರೂ ಅವಳನ್ನು ಏಕವಚನದಲ್ಲೇ ಮಾತಾಡಿಸುತ್ತಿದ್ದರು. ಬೇರೆ ಜಾತಿಯವರು ಹೊಲೆಯರನ್ನು ಮಾತಾಡಿಸುವುದೇ ಹಾಗೆ. ತಿಮ್ಮಿಗೆ ಅದೆಲ್ಲಾ ತಿಳಿಯುತ್ತಲೂ ಇರಲಿಲ್ಲ. ಮೊದಲಿನಿಂದ ತನಗೆ ಒಗ್ಗಿಹೋಗಿದ್ದ ನಮ್ರತೆಯಿಂದಲೇ ಅವರೊಡನೆ ಮಾತಾಡಿ ಸಾರಿಗಾಗಿ ಬೋಸಿ ತೆಗೆದುಕೊಂಡು ಮತ್ತೆ ಬರಬೇಕಾಗಿದ್ದುದರಿಂದ ಹೊರಟುಹೋದಳು"[1] ದಲಿತರಿಗೆ ಮೇಲ್ವರ್ಗದವರು ತಮ್ಮನ್ನು ಕೀಳಾಗಿ ಕಾಣುತ್ತಿದ್ದ ವಿಚಾರವೂ ತಿಳಿದಿರಲಿಲ್ಲ, ಜಮೀನ್ದಾರರು ತಮ್ಮ ಪಾಲಿನ ಜಮೀನುಗಳನ್ನು ಮೋಸದಿಂದ ಕಸಿದುಕೊಳ್ಳುತ್ತಿದ್ದ ಅರಿವೂ ಅವರಿಗಿರಲಿಲ್ಲ. ಹಾಗೆಯೇ ನೋಡಿದರೆ ನೆಲ್ಲೂರಿನ ಹೊಲಗೇರಿಯ ಚಿತ್ರಣವನ್ನು ನೀಡುವಾಗ ಲೇಖಕರು ಅವರಿಗಾಗಿದ್ದ ಅನ್ಯಾಯಗಳ ಕುರಿತು ಮಾತನಾಡುತ್ತಾರೆ. ನೆಲ್ಲೂರಿನಲ್ಲಿ ಇದ್ದ ಹೊಲಗೇರಿಯ ಹತ್ತು ಹನ್ನೆರಡು ಕುಟುಂಬಗಳ ಬದುಕು ಮಾದನ ಬದುಕಿಗಿಂತಲೂ ಭಿನ್ನವಾಗಿರಲಿಲ್ಲ. ಅವರಾರು ಬೇಸಾಯಕ್ಕೆಂದು ಸ್ವಂತ ದನಕರುಗಳನ್ನು ಇಟ್ಟುಕೊಂಡಿರಲಿಲ್ಲ. ಹೆಚ್ಚೆಂದರೆ ಎರಡೊ ಮೂರೊ ಆಡು ಕುರಿಗಳನ್ನು ಸಾಕುತ್ತಿದ್ದರು ಅಷ್ಟೆ. ಕುಳವಾಡಿಕೆಯದೆಂದು ತಮಗೆ ಇದ್ದ ಅಲ್ಪಸ್ವಲ್ಪ ಜಮೀನಿನ ಬೇಸಾಯಕ್ಕೂ ಒಕ್ಕಲಿಗರನನ್ನೊ, ಕುರುಬರನ್ನೊ ಅವಲಂಭಿಸಿದ್ದರು. ಇಲ್ಲವೇ ಅವರಿಗೆ ಗುತ್ತಿಗೆ ಕೊಟ್ಟುಬಿಡುತ್ತಿದ್ದರು. ಒಮ್ಮೆ

ಸರ್ಕಾರದವರೇ ಬಂದು ಸ್ವಂತ ಬೇಸಾಯ ಪ್ರಾರಂಬಿಸಿ, ದನಕರುಗಳು ನೇಗಿಲು ಇತ್ಯಾದಿಗಳನ್ನು ಕೊಂಡುಕೊಳ್ಳಲು ಸಾಲ ಕೊಡುತ್ತೇವೆ, ಗುಡಿಸಲುಗಳ ಜಾಗದಲ್ಲಿ ಹೆಂಚಿನ ಮನೆಗಳನ್ನು ಕಟ್ಟಿಸಿಕೊಡುತ್ತೇವೆ ಎಂದೆಲ್ಲ ಹೇಳಿದರು. ಆಗ ಎಲ್ಲರೂ ಅವರು ಕೊಡುವ ರಿಯಾಯಿತಿ ಸಾಲವನ್ನು ತೆಗೆದುಕೊಂಡಿದ್ದರು ನಿಜ. ಆದರೆ ದ್ಯಾವಯ್ಯ, ಮಾಯಿಗಯ್ಯರ ಹೊರತಾಗಿ ಯಾರೂ ಹೆಂಚಿನ ಮನೆ ಕಟ್ಟಲಿಲ್ಲ. ಸ್ವಂತ ಬೇಸಾಯಕ್ಕೆ ದನಕರುಗಳನ್ನಾಗಲಿ ಬೇಸಾಯದ ಸಾಮಾನುಗಳನ್ನಾಗಲಿ ಕೊಂಡುಕೊಳ್ಳಲಿಲ್ಲ. ಕೂಲಿಗೆ ಹೋಗಲು ಇಟ್ಟುಕೊಂಡಿದ್ದ ಗುದ್ದಲಿಗಳು ಸವೆದುಹೋಗಿದ್ದರಿಂದ ಒಂದೊಂದು ಹೊಸ ಗುದ್ದಲಿಗಳನ್ನು ಕೊಂಡರು ಅಷ್ಟೆ. ಉಳಿದಂತೆ ಸರ್ಕಾರದಿಂದ ಬಂದ ಹಣವನ್ನು ಯಾವಾಗಲೋ ಮಾಡಿಕೊಂಡ ಈಗ ಬರೀ ಬಡ್ಡಿ ತೆರುತ್ತಿದ್ದ ಸಾಲವನ್ನು ತೀರಿಸಲು, ಹಣ ಇರುವತನಕ ಕುಡಿದು ತಿಂದು ಮಜಾ ಮಾಡಲು ಬಳಸಿಕೊಂಡಿದ್ದರು. ಸರ್ಕಾರದ ಸಾಲವನ್ನು ತೀರಿಸುವ ಕಾಲ ಬಂದಾಗ ಜಮೀನನ್ನು ಒತ್ತೆ ಇಟ್ಟೋ ಬಡ್ಡಿಯ ಸಾಲ ಮಾಡಿಯೊ ತೀರಿಸಿದ್ದರು. ಪರಂಪರಾಗತವಾಗಿ ಬಂದಿದ ಪರಾವಲಂಬಿತನವನ್ನೂ, ಕ್ಯಾತೇಗೌಡನಂಥವರ ಬಿಗಿಮುಷ್ಠಿಯ ಹಿಡಿತವನ್ನೂ ಬೇಸಾಯದ ಮಟ್ಟಿಗಾದರೂ ಬಿಡಿಸಿಕೊಂಡಿದ್ದವರೆಂದರೆ ದ್ಯಾವಯ್ಯ ಮತ್ತು ಮಾಯಿಗಯ್ಯ ಇಬ್ಬರೇ. ಸ್ವಂತ ದನಕರುಗಳನ್ನು ಇಟ್ಟುಕೊಂಡು ಬೇಸಾಯಕ್ಕೆ ಅವರು ತೊಡಗಿದ್ದರು. ಹೊಲಗೇರಿಯಲ್ಲಿದ್ದ ಎರಡು ಹೆಂಚಿನ ಮನೆಗಳೆಂದರೆ ಅವರವೇ. ಮಿಕ್ಕವರಿಗೆ ತಾವು ಚಿಕ್ಕಂದಿನಿಂದ ಬೆಳೆದಿದ್ದ ಗುಡಿಸಲುಗಳನ್ನು ಬಿಡಲು ಅಥವಾ ಬಿಡಿಸಿಕೊಳ್ಳಲು ಸಾಧ್ಯವಾಗಲೇ ಇಲ್ಲ"[2] ಹೀಗೆ ಒಟ್ಟಾರೆ ನೆಲ್ಲೂರಿನ ದಲಿತರ ಬದುಕು ಇತರೆಡೆಗಳಲ್ಲಿ ದಲಿತರ ಬದುಕಿನ ವಾಸ್ತವತೆಯನ್ನೆ ತೆರೆದಿಡುತ್ತದೆ. ದಲಿತರನ್ನು ಶೋಷಿಸುತ್ತಿರುವುದು ಬ್ರಾಹ್ಮಣವರ್ಗವೆಂದು ಚಿತ್ರಿಸುವ ಕನ್ನಡ ಸಾಹಿತ್ಯ ಈ ದಲಿತರ ಆರ್ಥಿಕ, ಸಾಮಾಜಿಕ ಶೋಷಣೆಗೆ ಮೂಲ ಕಾರಣ ಜಮೀನ್ದಾರರು ಎನ್ನುವ ಶ್ರಮಭಾಷೆಯ ಧೋರಣೆಗಳನ್ನು ವ್ಯಕ್ತಪಡಿಸುವುದು ಕಡಿಮೆ. ಹಾಗೊಂದು ವೇಳೆ ಶ್ರಮಸಂಸ್ಕೃತಿ ಹಿನ್ನೆಲೆಯಲ್ಲಿ ಕನ್ನಡ ಸಾಹಿತ್ಯವನ್ನು ಅವಲೋಕಿಸಿದರೆ ದಲಿತರ ಸಮಕಾಲೀನ ಪರಿಸ್ಥಿತಿಗೆ ಮೂಲ ಕಾರಣ ಜಮೀನ್ದಾರರ ಶೋಷಣೆಯೆನ್ನುವ ಸಾಮಾನ್ಯ ಅರಿವು ನಮಗುಂಟಾಗುತ್ತದೆ. ಪೌರೋಹಿತ್ಯ ವರ್ಗದ ವಿರುದ್ಧ ದಲಿತರನ್ನು ಎತ್ತಿಕಟ್ಟುವ ಬದಲು ಜಮೀನ್ದಾರರ ಶ್ರಮಭಂಜಕ ನಡವಳಿಕೆಯ ವಿರುದ್ಧ ಮಾತನಾಡಬೇಕಾದ ಪರಿಸ್ಥಿತಿ ಇಂದು ತಲೆದೋರಿದೆ. ಈ ಮಾತುಗಳಿಗೆ ಉದಾಹರಣೆಯಾಗಿ ನೆಲ್ಲೂರಿನ ಚಿತ್ರಣ ಕಂಡುಬರುತ್ತದೆ ಎನ್ನಬಹುದಾಗಿದೆ.

ಸತ್ತವನ ಸುಳಿಯಲ್ಲಿ ಕತೆಯಲ್ಲಿ ಬರುವ ಹೊಲೆಯರ ರಾಚನ ಹಿನ್ನೆಲೆಯಲ್ಲಿ ಜಮೀನ್ದಾರರು ಹಾಗೂ ಹೊಲೆಯರ ಸಂಬಂಧ ಚಿಕ್ಕಂದಿನಿಂದ ದೊಡ್ಡವರತನಕ

ಹೇಗೆ ಬೆಳೆದುಬರುತ್ತದೆ ಎನ್ನುವುದನ್ನು ತಿಳಿಸುತ್ತದೆ. ಹುಟ್ಟುತ್ತಾ ಅಣ್ಣತಮ್ಮಂದಿರು ಬೆಳೆಯುತ್ತಾ ದಾಯಾದಿಗಳು ಎನ್ನುವ ರೀತಿಯಲ್ಲಿ ಚಿಕ್ಕಂದಿನಲ್ಲಿ ಸ್ನೇಹಿತರು, ಬೆಳೆದ ಮೇಲೆ ಜಾತಿವಂತರು ಎನ್ನುವಂತಹ ಪರಿಸ್ಥಿತಿಯನ್ನು ದ್ಯಾವೇಗೌಡರ ಹಿನ್ನೆಲೆಯಲ್ಲಿ ರಾಚ ಈ ರೀತಿಯಲ್ಲಿ ವಿವರಿಸುತ್ತಾನೆ.

“ಸಣ್ಣಪ್ನೋರ್ಮಗ ದ್ಯಾವಪ್ನೋರಿದ್ರಲ್ಲ. ಅವ್ರು ನನ್ನಯ್ಸ್ನೋರೆಯ. ನಾನು ಅವ್ರ್ ಮನೆ ಸೇರುವೊತ್ಗೆ ಅವ್ರ್ ಇಸ್ಕೋಲು ಮುಗ್ದೋಗಿತ್ತು. ನಾಕ್ನೆ ಕಳಾಸ್ಗಂಟ್ಲೊ ಐದ್ನೆ ಕಳಾಸ್ಗಂಟ್ಲೊ ಅವ್ರಪ್ಪ ಓದ್ಸಿದ್ರಂತೆ. ಅಕ್ಷರ ಹತ್ನಿಲ್ ಅಂತ ಬುಡುಸ್ಬುಟ್ರಂತೆ. ಅಕ್ಷರ ಅಂದ್ರೇನು, ಅದು ಹತ್ತೂದು ಅಂದ್ರೆಂಗೆ ಅಂತ ನನುಗ್ಗೊತ್ತಿಲ್ಲ ಬುಡಿ, ನಾನು ಇಸ್ಕೂಲ್ ಮೆಟ್ಲ್ನೆ ಹತ್ನಿಲ್ವಲ್ಲ? ದ್ಯಾವಪ್ನೋರು ನನ್ಜೊತೇಲಿ ಆಟಗೀಟ ಆಡಿಕ್ ಬರೂರು. ಕುಂಟಾಟ ಆಡಿ ಅವ್ನ್ನ ನಾನು ಹೆಗುಲ್ಮೇಲೊತ್ತಿವ್ನಿ, ನನ್ನ ಅವ್ರೂ ಹೆಗುಲ್ಮೇಲೊತ್ತವ್ರೆ. ಊಟುಕ್‌ಗೀಟುಕ್ ಮಾತ್ರೆ ಜೊತೇಲಿರ್ತಿರ್ನಿಲ್ಲ. ನಿಮುಗ್ಗೊತ್ತಲ್ಲ, ಅವ್ರೂಟ ಮನೆಲಿ, ನನ್ನೂಟ ಕೊಟ್ಗೇಲಿ, ನಾವು ಹೆಗುಲ್ಮೇಲೆ ಒಬ್ರೊಬ್ರು ಹೊತ್ತಾಡ್ದೊ ಅನ್ನೋದು ಅವ್ರವ್ನುಗ್ ಗೊತ್ತಾದ್ದಿನ ಇಬ್ಬರ್ಗೂ ಎಟ್ಟೆಳೂವು. ಆಮೇಲಮೇಲೆ ದ್ಯಾವಪ್ನೋರು ನನ್ನಿಂದ ದೂರ್ದೂರ ಆದ್ರು. ಆಟಗೀಟ ಅನ್ನಂದು ಜೊತೇಗ್ ಬತ್ತಿ ರ್ನಿಲ್ಲ. ಕೆಲ್ಸಗಿಲ್ಸ ಹೇಳಿಕ್ ಬರೂರು. ಸಣ್ಣಪ್ನೋರ್ ಸತ್ಮೇಲೆ ದೂರನೆ ಆಗೋದ್ರು. ಅವ್ರು ಯಜ್ಮಾನ್ರು, ನಾನು ಆಳು ಎನ್ನುತ್ತಾನೆ.

ಇಲ್ಲಿ ರಾಚ ಜಾತ್ಯಸ್ಥ ಎನ್ನುವುದೆ ದ್ಯಾವಪ್ಪನವರ ಕೋಪಕ್ಕೆ ಕಾರಣವಾಗುತ್ತದೆ. ಚಿಕ್ಕಂದಿನಲ್ಲಿ ಹೆಗಲ ಮೇಲೆ ಹೊತ್ತುಕೊಂಡು, ಜಾತಿಗೆ ಬೆಲೆ ಕೊಡದೆ ಒಬ್ಬ ರಿಗೊಬ್ಬರು ಸ್ನೇಹದಿಂದಿದ್ದು, ಆ ಸ್ನೇಹಕ್ಕಾಗಿ ಮನೆಯವರ ಬಳಿ ಹೊಡೆತ ತಿಂದಿದ್ದ ದ್ಯಾವಪ್ಪನವರೇ ಬೆಳೆದ ಮೇಲೆ ರಾಚನ ವಿರುದ್ಧ ನಿಲ್ಲುತ್ತಾರೆ. ತನ್ನ ಸಾಕಿ ಸಲುಹಿದ ಸಣ್ಣಪ್ಪನವರ ಋಣಕ್ಕಾಗಿ ದ್ಯಾವಪ್ಪನವರ ಮನೆಯಲ್ಲಿದ್ದ ರಾಚ ದ್ಯಾವಪ್ಪನವರ ನಡೆಯನ್ನು ಸಹಿಸಿಕೊಳ್ಳಲಾರದೆ ಮನೆ ಬಿಟ್ಟು ಹೋಗಲು ನಿರ್ಧರಿಸುತ್ತಾನೆ ಆಗ ದ್ಯಾವಪ್ಪ ನಡೆದುಕೊಂಡ ರೀತಿಯಲ್ಲಿ ಪುನಃ ರಾಚ ಹೀಗೆ ವಿವರಿಸುತ್ತಾನೆ.

ಈ ಮನೆ ಬುಡಿಕ್ ನೋಡ್ತಾ ಅವ್ನೆ ರಾಚ ಅನ್ನೂದು ಯಂಗೊ ಏನೊ ಇವ್ರ್ ಕಿವೀಗ್ ಬಿಳ್ತು. ಒಡ್ಡು ಬಡ್ಡು ಸೀಕ್ಷಿ ಕೊಟ್ರು. ಒಂದ್ಕೆ ಎರ್ಡ್ ಸೆರ್ಸಿ ಈಗಿಂದೀಗ್ಲೆ ತಂದ್ ಮಡುಗ್ಬುಟ್ಟೊಗು ಅಂದ್ರ. ಯಂಗ್ ತರನೆ ನೀವೆ ಹೇಳಿ. ಬ್ಯಾರೇರ್ಮನೇಗೋಗಿದ್ರೂವೆ ನನುಗ್ ಬತ್ತಿದ್ ಪುಣ್ಯತಾನೆ ಏನು? ಎಲ್ಗೋದ್ರೂ ಜೀತ ಗೆಯ್ಯೊದೆ ಅಲ್ವ ಅಂತ ಇವ್ರ್ ಮನೆಲೆ ಉಳ್ಕಂದೆ. ಈಗ ದ್ಯಾವಪ್ನೋರು ಸತ್ತೋಗವ್ರೆ. ಮುಂದ್ಕೆಂಗೆ ಅಂತಾ ಇವ್ನಿ ಈಗ್ಲೂ ಅವ್ರ್ ಮನೆ ಬುಡೂದು ಸುಲ್ಬ ಅಲ್ಲ ಅನ್ನುಸ್ತುದೆ. ದ್ಯಾವಪ್ನೋರ್

ಕೊನೆ ಯಂಡ್ತಿ ಬಲೇ ಘಾಟಿ ಹೆಂಗ್ಸು. ಅವ್ರಪ್ಪ ಬ್ಯಾರೆ ಅನ್ನೊಂದ್‌ದಿನ್ದಿಂದ ಇಲ್ಲೆ ತಳ ಊರವ್ನೆ. ಬುದ್ಧಿ ಇಲ್ದ ಆ ಹೈದ್ನ ಒಂದ್ ಗತಿ ಕಾಣುಸ್ಬುಟ್ಟು ಅಷ್ಟ್ ದೊಡ್ಡಾಸ್ತಿ ಮ್ಯಾಲೆ ಅಪ್ಪ ಮಗ್ಳು ಅದ್ಕಾರ ನಡ್ಸಿಕ್ ನೋಡ್ತಾ ಅವ್ರೆ. ಇಂತೆ ಹದ್ನೋಲ್ ಕೈಯಿಂದ ಯಂಗ್ ತಪ್ಪುಸ್ಕಳ್ಳಿ ಹೇಳಿ?[3] ಎನ್ನುತ್ತಾನೆ ರಾಚ. ದ್ಯಾವಪ್ಪ ರಾಚನ ಜಾತಿನಿಂದನೆ ಮಾಡಿ, ಅವನ ಆಸ್ತಿಯನ್ನು ಮುಟ್ಟುಗೋಲು ಹಾಕಿಕೊಳ್ಳಲು ಪ್ರಯತ್ನಿಸಿದರು. ರಾಚನೊಳಗಿನ ನಿಯತ್ತು ಇನ್ನೂ ಜೀವಂತವಾಗಿದೆ. ಅವನು ಈಗಲೂ ತನ್ನನ್ನು ಸಾಕಿ ಬೆಳೆಸಿದ ಕುಟುಂಬದ ಕುರಿತು ಆಲೋಚಿಸುತ್ತಿದ್ದಾನೆ. ದೈಹಿಕ ಕೊಳಕಿಗಿಂತ ಮಾನಸಿಕ ಕೊಳಕು ದೊಡ್ಡದು. ಜಾತಿಯಿಂದ ಕೀಳಾಗಿದ್ದರೂ ರಾಚ ಗುಣದಲ್ಲಿ ದ್ಯಾವಪ್ಪನಿಗಿಂತಲೂ ಮೇಲು ಎನ್ನುವುದನ್ನು ಲೇಖಕರು ಇಲ್ಲಿ ಸ್ಪಷ್ಟವಾಗಿ ಚಿತ್ರಿಸುತ್ತಾರೆ. ಜಾತಿ ಮೇಲಾಗಿರುವುದಕ್ಕಿಂತಲೂ ಗುಣ ಮೇಲಾಗಿರಬೇಕು ಎನ್ನುವುದನ್ನು ಲೇಖಕರು ಮುಖ್ಯವಾಗಿ ಗುರುತಿಸುತ್ತಾರೆ.

'ಗೋಡೆಗಳ ನಡುವೆ' ಕಥಾಸಂಕಲನದ 'ತಲೆಮಾರು' ಕತೆಯು ರಾತ್ರಿಯಿಡೀ ಸುರಿದ ಮಳೆಯಿಂದಾಗಿ ಗುಡಿಸಿಕೊಳಗೆ ನೀರು ನಿಂತು ಜವರ ಮತ್ತು ತಿಮ್ಮಿ ಮಲಗಲು ಜಾಗವಿಲ್ಲದ ಒಬ್ಬೊಬ್ಬರು ಒಂದೊಂದು ಮೂಲೆಯಲ್ಲಿ ಕುಕ್ಕರಗಾಲಿನಲ್ಲೆ ಕುಳಿತು ಆ ರಾತ್ರಿಯನ್ನು ಕಳೆಯುವಾಗಿನ ಅವರ ಮಾತುಕತೆಯಲ್ಲಿ ಅವರ ಬದುಕಿನ ಅನಾವರಣವಾಗುತ್ತದೆ. ವಿದ್ಯೆ ಕಲಿತ ಮಗ ಮಾದ ದಲಿತರಿಗಾಗಿ ಸರ್ಕಾರ ನೀಡುವ ಸವಲತ್ತನ್ನು ಬಳಸಿಕೊಳ್ಳುವಲ್ಲಿ ಮಾರ್ಗದರ್ಶಿಯಾಗುತ್ತಾನೆ. ತಲೆಮಾರಿನಿಂದಲೂ ತಲೆತಗ್ಗಿಸಿಯೇ, ಬಂದ ನೋವನ್ನೆಲ್ಲಾ ಹೆದರುತ್ತಲೇ ನುಂಗಿ ಬಂದ ಜೀವ ಜವರ ಕತೆಯ ಕೊನೆಯಲ್ಲಿ ಆತ್ಮವಿಶ್ವಾಸದಿಂದ ತಲೆ ಎತ್ತುವ ಧೈರ್ಯ ಮಾಡುತ್ತಾನೆ. ದಲಿತರು ಎಂದರೆ ಸಮಾಜದಲ್ಲಿನ ಅತ್ಯಂತ ತಳಸ್ತರದ ಸಮುದಾಯದವರು. ಇವರಿಗೆ ಯಾರೂ ತಲೆ ಬಾಗುವುದಿಲ್ಲ, ಗೌರವ ನೀಡುವುದಿಲ್ಲ ಎಂದಷ್ಟೇ ತಿಳಿದಿದ್ದ ಜವರನಿಗೆ ತನ್ನೂರಿನ ಗೌಡನೊಬ್ಬ ದಲಿತ ಅಧಿಕಾರಿಯ ಮುಂದೆ ಕೈಕಟ್ಟಿ ನಿಲ್ಲುವ, ಅವನು ಹೇಳಿದ ಕೆಲಸವನ್ನು ಪರಿಪಾಲಿಸುವುದನ್ನು ಕಂಡಾಗ ಜವರನಿಗೆ ವಿದ್ಯೆಗಿದ್ದ ಮಹತ್ವದ ಅರಿವುಂಟಾಗುತ್ತದೆ. ತನ್ನ ಮಗನೂ ಸಹ ಆ ಅಧಿಕಾರಿಯಂತಾಗಬೇಕೆಂಬ ಹಂಬಲದೊಂದಿಗೆ ಸಾಗುವ ರೀತಿ ಅಚ್ಚರಿ ಮೂಡಿಸುತ್ತದೆ. ಇದರ ನಡುವೆ ದಲಿತ ಸಂಘರ್ಷ ಸಮಿತಿಯ ಪ್ರವೇಶವು ಜವರನ ಅರಿವಿನ ಹಾದಿಯಲ್ಲಿ ಮಹತ್ವದ ಪಾತ್ರವನ್ನು ವಹಿಸುತ್ತದೆ ಎನ್ನುವುದನ್ನು ಇಲ್ಲಿ ಮುಖ್ಯವಾಗಿ ಗಮನಿಸಬೇಕಾಗುತ್ತದೆ.

ರಾತ್ರಿಯಿಡೀ ಸುರಿದ ಮಳೆಯಿಂದಾಗಿ ಸೋರುತ್ತಿದ್ದ ತನ್ನ ಮನೆಯಲ್ಲಿ ಕಾಲು ಚಾಚಲೂ ಆಗದೆ ಕೊರಗಿಕೊಂಡೆ ಇದ್ದ ಜವರ ಬೆಳಕು ಹರಿದೊಡನೆ ಮಳೆ ನೀರಿನಲ್ಲಿ ಒದ್ದೆಯಾಗಿದ್ದ ಬಟ್ಟೆಯಲ್ಲಿಯಲ್ಲಿಯೇ ಹೊಲೆಗೇರಿಯ ಒಂದು ಜಗಲಿಯ

ಮೇಲೆ ಬಂದು ಕಾಲು ಚಾಚಿ ನಿಟ್ಟುಸಿರುವ ಬಿಟ್ಟು ಕುಳಿತನು. ಅದೇ ಸಮಯಕ್ಕೆ ಹೊಲೇರ ಹುಡುಗ ಮಂಚ ದನಕರುಗಲನ್ನು ಹಿಡಿದು ಹೊರಕ್ಕೆ ಕಟ್ಟಲು ಇನ್ನೂ ಬಾರದೆ ಇದ್ದುದ್ದನ್ನು ಕಂಡು ಕೋಪಗೊಂಡಿದ್ದ ಪುಟ್ಟೇಗೌಡ ಉರಿಕೆಂಡವಾಗಿ ದುತ್ತನೆ ಹೊಲೆಗೇರಿಗೆ ನುಗ್ಗಿದ್ದನ್ನು ನೋಡಿ, ನೀಡಿದ್ದ ಕಾಲುಗಳನ್ನು ಜವರ ಸರಕ್ಕನೆ ಹಿಂದಕ್ಕೆ ಎಳೆದುಕೊಂಡ. ಎಳೆದುಕೊಂಡ ಬಿರುಸಿಗೆ ಮಂಡಿಗಳು ಕಳುಕ್ ಎಂದಂತಾಗಿ ಸಹಿಸಲಾಗದ ಯಾತನೆಯಾಯಿತು. 'ಅಯ್ಯಯ್ಯಪ್ಪಾ' ಎಂದು ಜವರ ಮತ್ತೆ ನರಳಿದ. ಜವರನ ನರಳು ಕಿವಿಯ ಮೇಲೆ ಬಿದ್ದರೂ ಬೀಳದವನಂತೆ, ನೀಡಿದ್ದ ಕಾಲುಗಳನ್ನು ಎಳೆದುಕೊಂಡು ಗೌರವ ತೋರಿಸಿದ್ದನ್ನು ಕಂಡರೂ ಕಾಣದವನಂತೆ, ಎದೆಯೊಳಗಿನ ಕೋಪವನ್ನು ಮುಖಕ್ಕೆ ಇಬ್ಬಷ್ಟು ತುಂಬಿಕೊಂಡು ಪುಟ್ಟೇಗೌಡ ಹೋಗಿಬಿಡುತ್ತಾನೆ. ಇಲ್ಲಿ ಜವರ ತಾನೇಷ್ಟೇ ನೊಂದಿದ್ದರೂ ಮೇಲ್ಜಾತಿಯವರಿಗೆ ನೀಡುತ್ತಿದ್ದ ಗೌರವಗಳನ್ನು ಭಯಭಕ್ತಿಯಿಂದಲೇ ನೀಡುತ್ತಿದ್ದ. ಆದರೆ ಮೇಲ್ವರ್ಗದವರು ದಲಿತವರ್ಗದ ಈ ಗೌರವವನ್ನು ಕಿಂಚಿತ್ತೂ ಲೆಕ್ಕಿಸದೇ ಅಹಂನಲ್ಲಿಯೇ ನಡದು ತಮ್ಮ ದರ್ಪವನ್ನು ತೋರ್ಪಡಿಸುತ್ತಿದ್ದರು. ಇಂತಹ ಜನ ರಿಗೆ ಜವರ ಗೌರವಗಳನ್ನು ನೀಡುತ್ತಿದ್ದುದ್ದಾಗಲೀ, ಜವರ ಮೇಲ್ವರ್ಗದವರಿಗೆ ಹೆದರಿ ತನ್ನ ಗುಡಿಸಲನ್ನು ತೆರವುಗೊಳಿಸಿ ಸರ್ಕಾರದಿಂದ ಬರುತ್ತಿದ್ದ ಅನುದಾನವನ್ನು ಬಳಸಿಕೊಂಡು ಹೊಸ ಮನೆಯನ್ನು ಕಟ್ಟದೇ ಹೊಗುತ್ತಿದ್ದ ಪರಿಯನ್ನು ಕಂಡು ರೋಸಿ ಹೋಗುತ್ತಿದ್ದನು. ಇವನ ಕೋಪ ಎಷ್ಟರ ಮಟ್ಟಿನದು ಎಂದರೆ ಅವನಿಗೆ ದಲಿತ ವರ್ಗದವರು ಇಟ್ಟುಕೊಳ್ಳುತ್ತಿದ್ದ ಹೆಸರಿನ ಮೇಲೇಯೇ ಜಿಗುಪ್ಸೆ ಉಂಟಾಗಿಬಿಟ್ಟುತ್ತು. ಹಾಗಾಗಿ ಅವನು ತನ್ನ ಹೆಸರನ್ನು ಸಹ ಬದಲಿಸಿಕೊಂಡಿರುತ್ತಾನೆ. ಆದರೂ ಜವರ ತನ್ನ ಮಗನನ್ನು ಮಾದ ಎಂದು ಕರೆದಾಗ ಅವನು ಜವರ ಮೇಲೆ ಸಿಟ್ಟಾಗುತ್ತಿದ್ದನು.

'ತಿರ್‍ತಿರ್‍ಗ ಮಾದ ಮಾದ ಅಂತ ಕರ್‍ಯುದೆಂತೇದು. ಅದೇನ್ ಜಾತಿ ಗುಣ್ವ, ಹಿಡ್ದುದ್ದ ಬುಡ್ನಾರೆ ಅನ್ತಿಯಲ, ಕೋರ್ಟ್‌ಗೋಗಿ ಫೀಜ್ಕಟ್ಟಿ ಹೆಸುರ್ಬದ್ಲಾಯಿಸ್ಕ ಬಂದಿರೂದ್ಯಾಕೆ? ಇದೇ ಕೊನೆ ಸತಿ ಹೇಳ್ತಾ ಇರೂದು. ಇನ್ನೊಂದ್ ಸತಿ ಮಾದ ಅಂತ ಕರುದ್ರೆ ನಾನ್ ಸುಮ್ನಿರಿಕಿಲ್ಲ, ತಿಳ್ಕೊ.

ಇಟ್ಟ ಹೆಸರನ್ನು ಬದಲಾಯಿಸಿಕೊಳ್ಳುವುದು ಜವರಿಗೆ ಎಷ್ಟು ವಿಚಿತ್ರ ಎನಿಸುತ್ತಿತ್ತು. ಹುಟ್ಟಿದಾಗಿನಿಂದಲೂ ಕರೆಯುತ್ತಿದ್ದ ಹೆಸರನ್ನು ಬಿಟ್ಟು ಬದಲಿಗೆ ಬೇರೆ ಹೆಸರನ್ನು ಕರೆಯುವುದು ಬಿಟ್ಟು ಪುರುಷೋತ್ತಮ ಎಂದು ಕರೆಯುವುದು ಅವನಿಗೆ ಹಿಡಿಸದ ವಿಚಾರವಾಗಿತ್ತು. 'ಮಾದ ಕೆಂಚ ಮಂಚ ರಾಚ ಅಂತ ಹೆಸ ರ್‍ಡಿಟ್ಟೀರಲ್ಲ ಅವೆಂತೆ ಹೆಸರ್ಗೊಳು. ಹೋಗೆ ಮೇಲ್ಜಾತಿಯೋರ್‍ನೋಡಿ ಯೆಂತೆಂತೆ ಹೆಸ್ರಿಡ್ತಾರೆ ತಮ್ ಮಕ್ಕಳ್ಗೆ ಅಂತ. ಅಂತೆ ಹೆಸ್ರಿಡಿಕೆ ನಿಮ್ಗೇನ್ಬಂದಿದ್ದದು. ಅವ್ರೂ ನಿಮ್

ತಿಪ್ಪೇಗುಂಡಿಗೆ ತಳ್ಳುದ್ರು ನೀವೂ ಬಿದ್ಕಂಡ್ರಿ. ಅಲ್ಲೇ ಬಿದ್ಕಂದು ವದ್ದಾಡ್ತೀರೇ ಹೊರ್ತು ಮ್ಯಾಕೆದ್ದರ್ಬೇಕು ಅಂತ ಅನ್ನಿಸಲೆ ಇಲ್ವಲ' ಎನ್ನುತ್ತಿದ್ದನು. ಆದರೆ ಜವರನಿಗೆ ಮಾತ್ರ ದಲಿತರು ಇಟ್ಟುಕೊಳ್ಳುವ ಹೆಸರು ಮಗನಿಗೆ ಅಸಹ್ಯವಾಗಿಯೂ, ಮೇಲ್ವರ್ಗದವರು ಇಟ್ಟುಕೊಳ್ಳುವ ಹೆಸರು ಪ್ರಿಯವಾಗಿಯೂ ಏಕೆ ಕಾಣುತ್ತದೆ ಎನ್ನುವುದು ತಿಳಿಯಲಿಲ್ಲ. ಆದರೆ ಮಾದನಿಗೆ ಈ ಬಗೆಯ ಹೆಸರಿನಿಂದ ತನ್ನ ಜಾತಿಯನ್ನು ಗುರುತಿಸಿ ಅವಮಾನಗೊಳಿಸುತ್ತಿದ್ದ ಮೇಲ್ವರ್ಗದವರ ನಡೆಯ ವಿರುದ್ಧವಾಗಿ ನಿಲ್ಲುವುದು ಅನಿವಾರ್ಯವಾಗಿತ್ತು. ಯಾವ ಹೆಸರನ್ನು ಹಿಡಿದು ತನ್ನ ಜಾತಿಯನ್ನು ಗುರುತಿಸಿ ಅವಮಾನಗೊಳಿಸುತ್ತಿದ್ದರೋ ಆ ಹೆಸರೇ ತನಗೆ ಬೇಡವೆನ್ನುವ ನಿರ್ಧಾರಕ್ಕೆ ಅವನು ಬಂದಿದ್ದನು.

ದಲಿತ ಸಂಘರ್ಷ ಸಮಿತಿಯ ಯುವಕರು ದಲಿತರ ಸ್ಥಿತಿಗತಿಗಳನ್ನು ಕುರಿತು ಮಾತನಾಡುವಾಗ ದಲಿತರ ಸ್ಥಿತಿಗೆ ದಲಿತರಷ್ಟೇ ಕಾರಣವಲ್ಲವೆಂಬುದನ್ನು ಅರಿತುಕೊಂಡಿದ್ದರು. ಹಾಗಾಗಿ ಮಾದನಿಗೆ 'ನಮ್ಮವರ ರಕ್ತವನ್ನು ಹೀರಿ ಸವರ್ಣಿಯರು ಕೊಬ್ಬಿದ್ದಾರೆ. ಅವರ ರಕ್ತವನ್ನು ಬಸಿದು ನಮ್ಮವರಿಗೆ ತುಂಬಬೇಕು' ಎನ್ನುವ ಮಾತುಗಳು ಅಪ್ಪ ಪಾಂಡವಪುರಕ್ಕೆ ಹೋಗಿ ಮನೆಗೊಂದು ಅರ್ಜಿ ಸಲ್ಲಿಸಲು ಬಾರದೇ ಹೋಗುತ್ತಿದ್ದಾಗ ನೆನಪಾಗಿ ಅವನು ಕೆಂಡವಾಗುತ್ತಿದ್ದನು.

'ಬ್ವಾದೆಹುಲ್ಲು ಗೀದೆಹುಲ್ಲು ಅನ್ಕಂದು ನೀನಿನ್ನೂ ನಿಮ್ಮಪ್ಪುನ್ ಕಾಲ್ದಲ್ಲೆ ಬಿದ್ದಿರು. ಆ ಗೌಡ್ರೋಳ್ ಜನ ನೊಡು, ನಾಡಮಚುನ್ ಮನೆ ಬುಟ್ಟು ಮಂಗ್ಳೂರಂಚುನ್ ಮನೆ ಕಟ್ಕಂದು ಯಂಗ್ ಬೆಚ್ಚುಗ್ ಮನೀಕತ್ತರೆ ಅಂತ. ಮನೆ ಇಲ್ದೋರ್ಗೆ ಮನೆ ಕಟ್ಕಳಿಕೆ ಸರ್ಕಾರ ಸಹಾಯ ಮಾಡ್ತೂದೆ. ಅರ್ಜಿ ಹಾಕಂದ್ರೆ ನಮ್ಗೂವೆ ಮಂಗ್ಳೂರಂಚ್ನೂ, ಮರುದ್ಸಾಮಾನುನ್ನೂ, ಕಲ್ಲು ಇಟ್ಗೆ ಮಣ್ಣು ಮಸಿ ಅಂತ ಕೊಂಡ್ಕಳಿಕೆ ಹಣಾನೂ ಕೊಡ್ತರೆ. ಅವ್ರ್ ಕೊಡೂದುರ್ ಜೊತೇಗೆ ನಾವೂ ಮೈ ಮುರ್ದು ಗೇದ್ರ ಗೌಡ್ರೋಳಂತೆ ಮನೇನೆ ಕಟ್ಗಬೋದು"[4] ಎನ್ನುವ ತನ್ನ ಕನಸನ್ನು ತನ್ನ ತಂದೆ-ತಾಯಂದಿರ ಬಳಿ ಹೇಳಿಕೊಳ್ಳುತ್ತಾನೆ. ಹುಟ್ಟಿದಾಗಿನಿಂದ ದಲಿತ ಕೇರಿ ಕಟ್ಟಳೆಗಳನ್ನು ದಾಟಿ ಬಂದಿದ್ದ ಜವರನಿಗೆ ಮೇಲ್ವರ್ಗದವರ ಸರಿಸಮಾನವಾಗಿ ಮನೆ ಕಟ್ಟಿಕೊಳ್ಳುವ ಧೈರ್ಯವಿರಲಿಲ್ಲ. ಆದರೆ ಮಾದ ಶಿಕ್ಷಣವನ್ನು ಪಡೆದಿದ್ದವನು. ಅವನಿಗೆ ನಾವೂ ಮನುಷ್ಯರು, ನಾವು ಎಲ್ಲರ ಸರಿಸಮಾನವಾಗಿ ಬದುಕಬೇಕೆಂಬ ಹಂಬಲವಿತ್ತು. ಈ ತಾಕಲಾಟ ತಂದೆ-ಮಗನ ನಡುವೆ ಸದಾ ಜರುಗತ್ತಲೇ ಇರುತ್ತಿತ್ತು.

"ಮಂಗಳೂರಂಚುನ್ ಮನೆ ಕನ್ಸು ನಮ್ಗ್ಯಾಕ್ಲ ಮಾದ. ಇಸ್ಟೂಕ್ಕ ನಾವ್ವೋಗಿ

ಅರ್ಜಿ ಹಾಕಬುಟ್ರೆ ಅವ್ರು ಅದ್ನೆಲ್ಲ ಕಟ್ಬುಟ್ಟರ, ಮಿನಿಸ್ಟ್ರ ಮಕ್ಳು ಬಂದ್ರು ಅಂತ. ಅಡ್ಗೆ ಮಾಡಾಯ್ತ್ಲೆ ಬಿಗ್ಯಾಗುಂಡ್ಬುಟ್ಟು ಇಸ್ಕೋಲ್ಮಾಡ್ಕಬರೋಗು"[5] ಎನ್ನುವ ಅಸಹಾಯಕ ಮಾತುಗಳನ್ನು ಜವರ ಹೇಳುತ್ತಾನೆ. ಜವರನಿಗೆ ಇನ್ನೂ ಸಹ ದಲಿತರನ್ನು ತಾತ್ಸಾರದಿಂದ ಕಾಣುತ್ತಾರೆ. ನಾವು ನಮ್ಮ ಹಕ್ಕುಗಳನ್ನು ಕೇಳಲು ಹೋದರೆ ಯಾರೂ ಸಹ ನಮಗೆ ಬೆಲೆ ಕೊಡುವುದಿಲ್ಲ ಎನ್ನುವ ಭ್ರಮೆಯಿತ್ತು. ಮಾದ ಈಗ ಜವರನಲ್ಲಿದ್ದ ಆ ಭ್ರಮೆಯನ್ನು ಒಡೆಯಬೇಕಾಗಿತ್ತು. ಇದು ಜವರನ ಒಬ್ಬನ ಕತೆಯಲ್ಲ. ಇಂತಹ ನೂರಾರೂ ಜವರರು ನಮ್ಮ ದೇಶದಲ್ಲಿದ್ದಾರೆ. ಅಂತಹವರ ಭ್ರಮೆಯನ್ನು ಹೋಗಲಾಡಿಸಿ ತಮ್ಮ ಹಕ್ಕುಗಳನ್ನು ಪಡೆದುಕೊಳ್ಳಲು ಮುಂದಾಗುವಂತೆ ಮಾಡಲು ಮಾದನಂತಹ ವಿದ್ಯಾವಂತ ಯುವಕರು ಮುಂದಾಗಬೇಕಿದೆ ಎನ್ನುವುದನ್ನು ನಾವಿಲ್ಲಿ ಮರೆಯುವಂತಿಲ್ಲ.

ತಂದೆಯನ್ನು ಸ್ನೇಹಿತನಿಂದ ತೆಗೆದುಕೊಂಡು ಬಂದಿದ್ದ ಸೈಕಲ್ ಮೇಲೆ ಕೂರಿಸಿಕೊಂಡು ಪಾಂಡವಪುರಕ್ಕೆ ಹೊರಟ ಮಾದ ಸೈಕಲ್ ಬ್ಯಾಲೆನ್ಸ್ ಮಾಡಲು ತಿಣುಕಾಡುತ್ತಿದ್ದನು. ಏಕೆಂದರೆ ಜವರ ಇದೂವರೆಗೆ ಸೈಕಲ್ ಮೇಲೆ ಕುಳಿತಿ ರಲಿಲ್ಲ. ಅವನು ವಾಲಾಡುತ್ತಿದ್ದುದರಿಂದ ಮಾದನಿಗೆ ಸೈಕಲ್ ಓಡಿಸುವುದಕ್ಕೆ ತೊಂದರೆಯಾಗುತ್ತಿತ್ತು. ಇದನ್ನು ನೋಡಿದ ಮೇಲ್ವರ್ಗದ ಗೌಡಕೇರಿಯ ಪುಂಡ ಹುಡುಗರು ಗೇಲಿ ಮಾಡಲು ಶುರು ಮಾಡಿದಾಗ ಮಾದನಿಗೆ ಸೈಕಲ್ ಮೇಲಿಂದ ಇಳಿದು ಹೋಗಿ ಗೌಡಜಾತಿ ಬಡ್ಡೆತ್ತದ್ದಕ್ಕೆ ಜಾಡಿಸಿ ಎದೆಗೆ ಒದ್ದುಬಿಡಬೇಕೆನಿಸುತ್ತಿತ್ತು. ಅವನ ಮನಸ್ಸಿನಲ್ಲಿದ್ದ ಕೋಪ, ಆಕ್ರೋಶ, ಆವೇಗಗಳೆಲ್ಲವೂ ಇಲ್ಲಿ ಒಟ್ಟಾಗಿ ಮಾದನಲ್ಲಿ ಮೂಡಿತ್ತು. ತಲೆತಲಾಂತರದಿಂದ ಮೇಲ್ವರ್ಗದವರು ಮೇಲಕ್ಕೆ ಬರುವ ಪ್ರತಿಯೊಬ್ಬ ದಲಿತನನ್ನು ಗೇಲಿ ಮಾಡುತ್ತಾ, ತುಳಿಯುತ್ತಾ ಸಾಗಿರುವುದರಲಿಂದಲೇ ಇನ್ನೂ ಸಹ ಈ ದೇಶವು ಸಮಸ್ಥಿತಿಗೆ ಬರಲು ಸಾಧ್ಯವಾಗಿಲ್ಲ. ಈಗಲೂ ತಳವರ್ಗದವರ ಸ್ಥಿತಿ ಜವರನಂತೆ ಡೋಲಾಯಮಾನ ಪರಿಸ್ಥಿತಿಯಲ್ಲಿಯೇ ಸಾಗುತ್ತಿರುವುದು ವಿಷಾದನೀಯ.

ಮಾದ ಮತ್ತು ಜವರ ಬಿಡಿಓ ಅಧಿಕಾರಿ ಮುಂದೆ ಹೋದಾಗ ಅವರು ಮಾದನನ್ನು ಈ ಮೊದಲೇ ನೋಡಿದ್ದರಿಂದ ಅವರನ್ನು ಆದರದಿಂದಲೇ ಮಾತನಾಡಿಸುತ್ತಾರೆ. ಇದು ಜವರನ ಆಶ್ಚರ್ಯಕ್ಕೆ ಕಾರಣವಾಗುತ್ತದೆ. ಬೆಳಿಗ್ಗೆ ದಲಿತಕೇರಿಯಲ್ಲಿ ದಲಿತರನ್ನು ಬಾಯಿಗೆ ಬಂದ ಹಾಗೆ ಬೈಯ್ಯುತ್ತಿದ್ದ ಪುಟ್ಟೇಗೌಡರು ದಲಿತರಾದ ಅಧಿಕಾರಿಯ ಬಳಿ ನಯವಿನಯದಿಂದ ಬಾಗಿ ನಮಸ್ಕಾರ ಮಾಡಿದ್ದು ಜವರನ್ನು ಚಕಿತಗೊಳಿಸುತ್ತದೆ.

"ಪುಟ್ಟೇಗೌಡ್ರೂ ಬಂದ್ಬುಟ್ಟವ್ರೆ. ನಮ್ಜಾತಿ ಸಾಯೇಬುರ್ಗೆ ಕೈ ಮುಗೀತಾ ಅವ್ರೆಲಾ! ಸಾಯೇಬ್ರಾದೋರ್ಗೆ ಎಲ್ರೂ ಕೈ ಮುಗೀಬೇಕನೋ? ಅಲ್ವಮಂತೆ. ಸಾಹೇಬ್ರು ಅಂದರೆ ಸುಮ್ನೆ ಆಯ್ತು! ಅದ್ಸರಿ, ಈ ಪುಟ್ಟೇಗೌಡ್ರು ಇಲ್ಯಾಕ್ ಬಂದ್ರು? ಇವರೂ ನಮ್ಮಂಗೆಯ ಅಂಚೂಗಳ ಕೊಡಿ ಅಂತ ಅರ್ಜಿ ಕೊಡಿಕ್ ಬಂದಿದ್ರ. ಇವ್ರ್ಗ್ಯಾಕಪ್ಪ ಅಂಚೂಗಳ. ಊರಗ್ಲುದ್ ಮನೆ, ಯಾವಾಗ್ ಕಟ್ಟುದ್ದೋ ಏನೊ, ಕಲ್ಲುಗಿಂಡ್ನಂಗದೆ" ಎನ್ನುವ ಮಾತುಗಳಲ್ಲಿ ಉಳ್ಳವರು ಬಡವರ ಅಸ್ಥಿಪಂಜರದ ಮೇಲೆ ಅರಮನೆಗಳನ್ನು ಕಟ್ಟಿಸಿಕೊಂಡ ಧಾರುಣ ಸ್ಥಿತಿಗಳ ಅನಾವರಣವಾಗುತ್ತದೆ. ಜವರ ಹೀಗೆ ಯೋಚಿಸುವಷ್ಟರಲ್ಲೇ ಇವನ ಜಾತಿಯ ಅಧಿಕಾರಿ ಕೈ ತೋರಿ ಇವರನ್ನು ಕುಳಿತುಕೊಳ್ಳಲು ಹೇಳಿದಾಗ ಈ ಹಿಂದೆ ಜವರ ಭ್ರಮೆಯಲ್ಲಿದ್ದಂತೆ ಯಾರೂ ಇವನಿಗೆ ಬೆಲೆ ನೀಡುವುದಿಲ್ಲ, ಅವಮರ್ಯಾದೆ ಮಾಡಿ ವಾಪಾಸ್ಸು ಕಳುಹಿಸುತ್ತಾರೆ ಎನ್ನುವ ನಿಲುವುಗಳು ಸುಳ್ಳು ಎನ್ನುವ ಭಾವನೆಯುಂಟಾಗುತ್ತದೆ. ಜವರನ ಮನೆಗಾಗಿ ಸಲ್ಲಿಸಿದ ಅರ್ಜಿಗೆ ಸಾಕ್ಷೀದಾರನಾಗಿ ಪುಟ್ಟೇಗೌಡನಿಗೆ ಸಹಿ ಮಾಡಲು ಅಧಿಕಾರಿ ಸೂಚಿಸಿದಾಗ ಪುಟ್ಟೇಗೌಡ ಯಾವುದೇ ಹಿಡಿತಕ್ಕೆ ಒಳಗಾಗದೆ ಅರ್ಜಿ ಸಹಿ ಮಾಡಿದ್ದೂ ಸಹ ಜವರನನ್ನು ಮತ್ತಷ್ಟೂ ಆಶ್ಚರ್ಯಕ್ಕೆ ಒಳಗಾಗುವಂತೆ ಮಾಡುತ್ತದೆ. ಊರಿನಲ್ಲಿ ಬೆಳಿಗ್ಗೆ ತನ್ನನ್ನು ಗಮನಿಸಿಯೂ ಗಮನಸಿದಂತೆ ಹೋದ ಪುಟ್ಟೇಗೌಡ ಅಧಿಕಾರಿಯ ಮುಂದೆ ಇವರು ನಮ್ಮವರೆ ಎನ್ನುವ ಮಾತು ಜವರನಲ್ಲಿ ಶಿಕ್ಷಣ ಶಕ್ತಿಯನ್ನು ಕುರಿತು ಆಲೋಚಿಸುವಂತೆ ಮಾಡಿಬಿಡುತ್ತದೆ.

ಹಳ್ಳಿಯ ಹೋಟೆಲ್‌ನಲ್ಲಿ ಸಿಲ್ವರ್ ಲೋಟದಲ್ಲಿ ಮೇಲಿನಿಂದ ಕಾಫಿಯೋ, ಟೀಯನ್ನೋ ಹಾಕಿಸಿಕೊಂಡು ಕುಡಿಯುತ್ತಿದ್ದ ಜವರ ಪಾಂಡವರಪುರದ ಹೋಟೆಲ್‌ನ ಒಳಗೆ ಕುಳಿತು ದಲಿತರು ಊಟ ಮಾಡುತ್ತಾರೆ ಎನ್ನುವುದು ಸಹ ಹೊಸತನದ ಗಾಳಿ ಎನ್ನುವುದನ್ನು ಜವರ ಅರಿತುಕೊಳ್ಳುತ್ತಾನೆ. ಆದರೆ ಇಲ್ಲಿಯೂ ಜವರನ ಕೂತುಹಲಕ್ಕೆ ಕಾರಣವಾದದ್ದು ಜವರನದೇ ಜಾತಿಯ ಅಧಿಕಾರಿ ತನ್ನ ಹೆಸರನನು ಬದಲಿಸಿಕೊಂಡಿಲ್ಲ. ಆದರೆ ಮಾದ ಯಾಕೆ ತನ್ನ ಜಾತಿಯ ಹೆಸರನ್ನು ಬದಲಿಸಿಕೊಳ್ಳಬೇಕು ಎನ್ನುವುದಾಗಿದೆ. ಇಲ್ಲಿ ಕೇವಲ ಹೆಸ ರಿನಿಂದ ಜಾತಿನಿಂದನೆ ಮಾಡುವುದಾಗಲಿ ಅಥವಾ ಹೆಸರಿನಿಂದಷ್ಟೇ ತಮಗಾಗುವ ಅವಮಾನದಿಂದ ತಪ್ಪಿಸಿಕೊಳ್ಳಬಹುದು ಎನ್ನುವ ಮಾದನ ನಿಲುವನ್ನು ನಾವಿಲ್ಲಿ ಒಪ್ಪಿಕೊಳ್ಳಲು ಸಾಧ್ಯವಾಗುವುದಿಲ್ಲ. ಆ ಅಧಿಕಾರಿ ಉನ್ನತ ಸ್ಥಾನಮಾನಗಳನ್ನು ಪಡೆದುಕೊಂಡರೂ ಸಹ ತನ್ನ ಹೆಸರನ್ನು ಆತ ಬದಲಿಸಿಕೊಂಡಿಲ್ಲ. ಆದರೂ ಜನ ಅವನಿಗೆ ಗೌರವವನ್ನು ನೀಡುತ್ತಿದ್ದಾರೆ ಎಂದರೆ ಅದು ಅವನ ಹೆಸರಿನ ಬಲದಿಂದಲ್ಲ. ಬದಲಿಗೆ ಶಿಕ್ಷಣದ, ಅಧಿಕಾರದ ಬಲದಿಂದ ಎನ್ನುವುದನ್ನು ಅರಿತುಕೊಂಡ ಜವರ

ತನ್ನ ಮಗನೂ ಸಹ ಆ ರೀತಿಯಲ್ಲಿ ಅಧಿಕಾರಿಯಾಗಬೇಕೆಂದು ಬಯಸುವುದು ಪ್ರತಿಯೊಬ್ಬ ದಲಿತರಲ್ಲಿಯೂ ಬದಲಾವಣೆಯ ಎಚ್ಚರಿಕೆಯ ಗಂಟೆಯಾಗಿ ಕತೆಯಲ್ಲಿ ಚಿತ್ರಿತಗೊಂಡಿದೆ ಎನ್ನಬಹುದಾಗಿದೆ.

**ಕೊನೆ ಟಿಪ್ಪಣಿಗಳು:**

1. ಬೋರೇಗೌಡ ಚಿಕ್ಕಮರಳಿ (1997). ನೆಲ್ಲೂರಿನಲ್ಲಿ ಒಂದು ದಿನ. ಸಾಗರ ಪ್ರಕಾಶನ. ಬೆಂಗಳೂರು. ಪು.ಸಂ. 76
2. ಬೋರೇಗೌಡ ಚಿಕ್ಕಮರಳಿ (1997). ನೆಲ್ಲೂರಿನಲ್ಲಿ ಒಂದು ದಿನ. ಸಾಗರ ಪ್ರಕಾಶನ. ಬೆಂಗಳೂರು. ಪು.ಸಂ. 85
3. ಬೋರೇಗೌಡ ಚಿಕ್ಕಮರಳಿ (1997). ಸತ್ತವನ ಸುಳಿಯಲಿ. ಸಾಗರ ಪ್ರಕಾಶನ. ಬೆಂಗಳೂರು. ಪು.ಸಂ. 147
4. ಬೋರೇಗೌಡ ಚಿಕ್ಕಮರಳಿ (2006). ಗೋಡೆಗಳ ನಡುವೆ. ಅನಿಕೇತನ ಪ್ರಕಾಶನ. ಪಾಂಡವಪುರ. ಪು.ಸಂ. 07
5. ಬೋರೇಗೌಡ ಚಿಕ್ಕಮರಳಿ (2006). ಗೋಡೆಗಳ ನಡುವೆ. ಅನಿಕೇತನ ಪ್ರಕಾಶನ. ಪಾಂಡವಪುರ. ಪು.ಸಂ. 08

**ಪರಾಮರ್ಶನಗಳು:**


1. ಬೋರೇಗೌಡ ಚಿಕ್ಕಮರಳಿ (1997). ನೆಲ್ಲೂರಿನಲ್ಲಿ ಒಂದು ದಿನ. ಸಾಗರ ಪ್ರಕಾಶನ. ಬೆಂಗಳೂರು.
2. ಬೋರೇಗೌಡ ಚಿಕ್ಕಮರಳಿ (1997). ಸತ್ತವನ ಸುಳಿಯಲಿ. ಸಾಗರ ಪ್ರಕಾಶನ. ಬೆಂಗಳೂರು.
3. ಬೋರೇಗೌಡ ಚಿಕ್ಕಮರಳಿ (2006). ಗೋಡೆಗಳ ನಡುವೆ. ಅನಿಕೇತನ ಪ್ರಕಾಶನ. ಪಾಂಡವಪುರ.